ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 343 |
| ಸದಸ್ಯರ ಹೆಸರು | : | ಶ್ರೀ ಎಂ ನಾಗರಾಜು<br>(ವಿಧಾನಸಭೆಯಿಂದ ಚುನಾಯಿತರಾದವರು) |
| ಉತ್ತರಿಸುವ ದಿನಾಂಕ | : | 14-02-2024 |
| ಉತ್ತರಿಸುವ ಸಚಿವರು | : | ಲೋಕೋಪಯೋಗಿ ಸಚಿವರು |

| | | |
|---|---|---|
| ಅ) | ಬೆಳಗಾವಿ ನಗರದಲ್ಲಿ ಹೊಸದಾಗಿ Elevated Road ನಿರ್ಮಾಣದ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ; ಹಾಗಿದ್ದಲ್ಲಿ, ಸದರಿ ಕಾರ್ಯಕ್ಕೆ ಯಾವಾಗ ಚಾಲನೆ ನೀಡಲಾಗುವುದು; | ಬೆಳಗಾವಿ ನಗರದಲ್ಲಿ ಹೊಸದಾಗಿ Elevated Road ನಿರ್ಮಾಣದ ಪ್ರಸ್ತಾವನೆಯನ್ನು ರೂ.450.67 ಕೋಟಿ ಮೊತ್ತಕ್ಕೆ ನಿರ್ದೇಶಕರು, ಕೇಂದ್ರ ಭೂಸಾರಿಗೆ ಮತ್ತು ಹೆದ್ದಾರಿಗಳ ಮಂತ್ರಾಲಯ, ನವದೆಹಲಿ, ಇವರಿಗೆ ಸರ್ಕಾರದ ಪತ್ರ ಸಂಖ್ಯೆ:222 ಸಿಎನ್‌ಹೆಚ್ 2023 (ಇ), ದಿನಾಂಕ: 20-12-2023 ರಂದು ಸಲ್ಲಿಸಲಾಗಿದೆ. ಕೇಂದ್ರ ಸರ್ಕಾರದಿಂದ ಕಾಮಗಾರಿಗೆ ಅನುಮೋದನೆ ದೊರೆತ ನಂತರ ನಿರ್ಮಾಣಕ್ಕಾಗಿ ಚಾಲನೆ ನೀಡಲಾಗುವುದು. |
| ಆ) | Elevated Road ನಿರ್ಮಾಣದ ಪ್ರಸ್ತಾವನೆ ಇದ್ದಲ್ಲಿ, ಇದಕ್ಕೆ ವೆಚ್ಚವಾಗುವ ಅಂದಾಜು ಮೊತ್ತವೆಷ್ಟು; ಈ ಕುರಿತು ರೂಪರೇಷೆ ತಯಾರಿಸಲಾಗಿದೆಯೇ; | Elevated Road ನಿರ್ಮಾಣಕ್ಕೆ ವೆಚ್ಚವಾಗುವ ಅಂದಾಜು ಮೊತ್ತ ರೂ.450.67 ಕೋಟಿ. ಸದರಿ ಕಾಮಗಾರಿಯ ವಿಸ್ತೃತ ಯೋಜನಾ ವರದಿ (DPR) ಯೊಂದಿಗೆ Chief General Manager, NHAI, Delhi ರವರಿಗೆ ಅಂದಾಜು ಪತ್ರಿಕೆಯನ್ನು ಸಲ್ಲಿಸಲಾಗಿದೆ. |
| ಇ) | ಬೆಳಗಾವಿಯಲ್ಲಿ Ring Road & Elevated ರಸ್ತೆಯನ್ನು ನಿರ್ಮಿಸಲು ರಾಜ್ಯ ಸರ್ಕಾರವು ಕೇಂದ್ರದಿಂದ ಅನುದಾನ ಪಡೆಯಲು ಪ್ರಸ್ತಾಪ ಸಲ್ಲಿಸಿವೆಯೇ; ಸಲ್ಲಿಸಿದ್ದಲ್ಲಿ, ರಾಜ್ಯದ ಪ್ರಸ್ತಾಪವು ಯಾವ ಹಂತದಲ್ಲಿದೆ? | ಬೆಳಗಾವಿಯಲ್ಲಿ Elevated ರಸ್ತೆಯನ್ನು ನಿರ್ಮಿಸಲು ರಾಜ್ಯ ಸರ್ಕಾರವು ಕೇಂದ್ರ ಸರ್ಕಾರಕ್ಕೆ ಪ್ರಸ್ತಾವನೆಯನ್ನು ದಿನಾಂಕ:20-12-2023 ರಂದು ಸಲ್ಲಿಸಲಾಗಿದೆ. ಅದರಲ್ಲಿ ರಾಜ್ಯ ಸರ್ಕಾರದಿಂದ ಈಗಾಗಲೇ ಸದರಿ ಕಾಮಗಾರಿಯ ರಾಜಧನ ಮತ್ತು ಎಸ್.ಜಿ.ಎಸ್.ಟಿ. ಮೊತ್ತದ ಬದಲಿಗೆ ರೂ.27.62 ಕೋಟಿಗಳನ್ನು ಭರಿಸಲು ಒಪ್ಪಿಗೆ ನೀಡಿ, ಕಾಮಗಾರಿಯನ್ನು ಕೈಗೊಳ್ಳಲು ಕೇಂದ್ರ ಸರ್ಕಾರವನ್ನು ಕೋರಲಾಗಿದೆ.<br><br>ಬೆಳಗಾವಿ ರಿಂಗ್ ರೋಡ್ ಕಾಮಗಾರಿಯನ್ನು ಭಾರತೀಯ ರಾಷ್ಟ್ರೀಯ ಹೆದ್ದಾರಿಗಳ ಪ್ರಾಧಿಕಾರದ ವತಿಯಿಂದ ಕೈಗೊಳ್ಳಲಾಗುತ್ತಿದ್ದು, ಇದರ ಭೂಸ್ವಾಧೀನ ವೆಚ್ಚದ ಪೈಕಿ ರೂ.140.00 ಕೋಟಿಗಳ ಮೊತ್ತವನ್ನು ರಾಜ್ಯ ಸರ್ಕಾರ ಭರಿಸಲು ದಿನಾಂಕ:04-06-2021 ರಲ್ಲಿ ಅನುಮೋದನೆ ನೀಡಲಾಗಿರುತ್ತದೆ. |

ಕಡತ ಸಂಖ್ಯೆ: ಲೋಇ 12 ಸಿಐಎಸ್ 2024

(ಸತೀಶ ಜಾರಕಿಹೊಳಿ)
ಲೋಕೋಪಯೋಗಿ ಸಚಿವರು